78

# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 276 ವಿಎಸ್‌ಸಿ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:24-02-2018

## ಅಧಿಸೂಚನೆ

ವಿಷಯ: ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿ ತಾಲ್ಲೂಕಿನ, ಹೆಬ್ಬಾಳ ಗ್ರಾಮದಲ್ಲಿ 20 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವ ಬಗ್ಗೆ.

ಉಲ್ಲೇಖ: ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್‌ರವರ ಮನವಿ ಪತ್ರ ಸಂಖ್ಯೆ:ಕೆ.ಆರ್.ಇ.ಡಿ/01/ ಆಡಳಿತ-559/2017/7250-51 ದಿನಾಂಕ:16.11.2017.

********

ಸೌರ ವಿದ್ಯುತ್‌ನ್ನು ಪ್ರೋತ್ಸಾಹಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 22.05.2014 ಮತ್ತು ತಿದ್ದುಪಡಿ ಸಂಖ್ಯೆ: ಇಎನ್ 49 ವಿಎಸ್‌ಸಿ 2016 ದಿನಾಂಕ: 12.01.2017ರಂತೆ ಸೌರ ನೀತಿ 2014-21ಅನ್ನು ಜಾರಿಗೊಳಿಸಿರುತ್ತದೆ. ಸದರಿ ನೀತಿಯನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಸೌರ ನೀತಿಯ ಅನುಷ್ಠಾನಕ್ಕೆ ನೇಮಿತ ಪ್ರತಿನಿಧಿಯಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪ್ರಸ್ತಾವನೆ ದಿನಾಂಕ:16.11.2017ರಂತೆ 20ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆ ಸ್ಥಾಪಿಸಲು ಮೆ॥ ಕೊಡಂಗಲ್ ಸೋಲಾರ್ ಪಾರ್ಕ್ಸ್ ಪ್ರೈ. ಲಿ., ರವರಿಗೆ ಕ್ರೆಡಲ್ ವತಿಯಿಂದ ಹಂಚಿಕೆ ನೀಡಿರುತ್ತದೆ. ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ 98-13 (ಎ-ಗು) ವಿಸ್ತೀರ್ಣದ ಖಾಸಗಿ ಜಮೀನುಗಳನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕ್ರೆಡಲ್ ಸಂಸ್ಥೆಯು ಗುತ್ತಿಗೆ ಪಡೆದು ಸದರಿ ಜಮೀನುಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆ ನೀಡುವ ಸಂಬಂಧ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 66 ವಿಎಸ್‌ಸಿ 2016 ದಿನಾಂಕ: 05.10.2016 ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ (ತಿದ್ದುಪಡಿ), 2015 (ಕರ್ನಾಟಕ ಅಧಿನಿಯಮ 2015ರ ಸಂಖ್ಯೆ: 31)ರನ್ವಯ ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ಅನುಬಂಧದಲ್ಲಿ ನಮೂದಿಸಿರುವ ಸರ್ವೆ ನಂಬರ್ ಹಾಗೂ ಭೂಮಾಲೀಕರ ಹೆಸರುಗಳನ್ನೊಳಗೊಂಡ 98-13 (ಎ-ಗು) ವಿಸ್ತೀರ್ಣದ ಖಾಸಗಿ ಜಮೀನುಗಳಲ್ಲಿ, ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಅಳವಡಿಸುವ ಉದ್ದೇಶದಿಂದ, ಕರ್ನಾಟಕ ಭೂ ಸುಧಾರಣಾ

ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಗುತ್ತಿಗೆ ಆಧಾರದ ಮೇಲೆ ಜಮೀನುಗಳನ್ನು ಪಡೆದು ತರುವಾಯ ಜಮೀನುಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆಗೆ ನೀಡಲು ಸರ್ಕಾರ ಅನುಮತಿಸಿದೆ.

ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಉಪಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಜಮೀನುಗಳ ಮಾಲೀಕತ್ವ/ವಾರಸುದಾರರು, ಸರ್ವೆನಂಬರ್ ಇತ್ಯಾದಿ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, 50 ಪ್ರತಿಗಳನ್ನು ಇಂಧನ ಇಲಾಖೆ, ವಿಕಾಸಸೌಧ, ಇಲ್ಲಿಗೆ ಸರಬರಾಜು ಮಾಡತಕ್ಕದ್ದು.

**ಪ್ರತಿಗಳು:**

1. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿ., ಕಾವೇರಿ ಭವನ, ಬೆಂಗಳೂರು-560 009.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು.
4. ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ.
5. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ನಂ. 9/2, 6ನೇ ಮತ್ತು 7ನೇ ಮಹಡಿ, ಮಹಾಲಕ್ಷ್ಮಿ ಛೇಂಬರ್ಸ್, ಎಂ.ಜಿ. ರಸ್ತೆ, ಬೆಂಗಳೂರು.
6. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ನಿರ್ದೇಶಕರು(ಆರ್ಥಿಕ), ಅಪರ ನಿರ್ದೇಶಕರು(ತಾಂತ್ರಿಕ ಮೇಲ್ವಿಚಾರಣೆ), ಜಂಟಿ ನಿರ್ದೇಶಕರು(ಎನ್.ಸಿ.ಇ. 2&3), ಜಂಟಿ ನಿರ್ದೇಶಕರು(ಯೋಜನೆ), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಶಾಖೆ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

76

**ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 276 ವಿಎಸ್‌ಸಿ 2017 ದಿನಾಂಕ:24.02.2018ಕ್ಕೆ ಅನುಬಂಧ**

**ಗ್ರಾಮ: ಹೆಬ್ಬಾಳ, ತಾಲ್ಲೂಕು-ಬಸವನ ಬಾಗೇವಾಡಿ, ಜಿಲ್ಲೆ-ವಿಜಯಪುರ**

| ಕ್ರ.ಸಂ | ಸರ್ವೇ ನಂ | ಭೂ ಮಾಲೀಕರ ಹೆಸರು | ವಿಸ್ತೀರ್ಣ | |
|---|---|---|---|---|
| | | | ಎಕರೆ | ಗುಂಟೆಗಳಲ್ಲಿ |
| 1 | 117/2 | ಶಿದ್ದನಗೌಡ ತಂ ಮಹಾಂತಪ್ಪ ಬಿಶಿರೊಟ್ಟಿ | 17 | 24 |
| 2 | 117/2 | ಈರಣ್ಣ ತಂ, ಶಿದ್ದಪ್ಪ ಬಿಶಿರೊಟ್ಟಿ | 34 | 27 |
| 3 | 120/1 | ಕಲ್ಲವ್ವ ಗಂ ಹಣಮಂತ ಕಾಗಲ್ | 07 | 19 |
| | | ಪೋಟ್ ಖರಾಬ್ (ಅ) | 00 | 10 |
| 4 | 120/2 | ಶ್ರೀಶೈಲ. ಬಸಗೊಂಡಪ್ಪ ಬಿರಾದಾರ | 04 | 18 |
| 5 | 123/2 | ಬಸಪ್ಪ ಸಂಗಪ್ಪ ಮಿಣಜಿಗಿ | 07 | 00 |
| 6 | 130/1 | ಚಂದವ್ವ ಗಂ. ಈರಣ್ಣ ಆಲೂರ | 03 | 31 |
| | | ಪೋಟ್ ಖರಾಬ್ (ಅ) | 00 | 03 |
| 7 | 130/2 | ನಾಗಪ್ಪ ತಂ ಮಲ್ಲಪ್ಪ ಆಲೂರ | 01 | 10 |
| 8 | 131/1 | ಸುರೇಶ್ ತಂ ಸಂಗನಗೌಡ ಲಿಂಗದಳ್ಳಿ | 11 | 22 |
| | | ಪೋಟ್ ಖರಾಬ್ (ಅ) | 00 | 06 |
| 9 | 131/2 | ಪ್ರಕಾಶ ತಂ. ಸಂಗನಗೌಡ ಲಿಂಗದಳ್ಳಿ | 9 | 35 |
| | | ಪೋಟ್ ಖರಾಬ್ (ಅ) | 00 | 08 |
| | | **ಒಟ್ಟು** | **98-13** | |

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.